*ಕಂಡಕ್ಟರ್ ರಾಜು, ಗುಬ್ಬಿ*
*ವಿಧಾನಸೌಧಕ್ಕೆ ದೃಷ್ಟಿಗೊಂಬೆ ಇಟ್ಟರೆ ಹೇಗೆ?*



ಒಳ್ಳೇ ತಮಾಷೆ ನಿಮ್ದು; ಎಡ್ಡಿ, ಗೌಡ್ರು, ಗೂಳಿಹಟ್ಟಿಗಿಂತಲೂ ದೃಷ್ಟಿಗೊಂಬೆ ಇಹುದೇಂ ಜಗದೊಳು?

*ಎನ್. ವಸಂತಾ ಆನಂದ್, ಕತ್ತರಗುಪ್ಪ*
*ಕುದುರೆಯಂತೆ ಬರುವ ದುರದೃಷ್ಟ ಇರುವೆಯಂತೆ ಚಲಿಸಲು ಕಾರಣವೇನಣ್ಣ?*
ಅದು ಇರುವೆ ಎಂದೇ ಬಂದಿದ್ದಲ್ಲವೇ, ಹೋಗಲು ಮನಸ್ಸಿಲ್ಲದ್ದರಿಂದ ವಿಳಂಬಕಾಲು!

*ವಿ. ಹಮೀದ್, ವಿಟ್ಲ*
*ಹಿಂದಿನ ಶಿಕ್ಷಕರಿಗೂ. ಇಂದಿನ ಶಿಕ್ಷಕರಿಗೂ ಇರುವ ವ್ಯತ್ಯಾಸವೇನು?*
ಅವರ ಶಿಕ್ಷಣ ಮಸ್ತಕಕ್ಕೆ ಅರ್ಪಿತ, ಇವರ ಶಿಕ್ಷಣ ಪುಸ್ತಕಕ್ಕೆ ಸೀಮಿತ.

*ಕೆ.ಆರ್. ದೇಸಾಯಿ, ರಾಯಚೂರು*
*ಪುಸ್ತಕ ಕೊಂಡು ಓದುವವರಿಗೂ, ಎರವಲು ಪಡೆದು ಓದುವವರಿಗೂ ಏನು ವ್ಯತ್ಯಾಸ?*
ಮೊದಲನೆಯವನು ತಮಿಳ, ಎರಡನೆಯವನು ಕನ್ನಡಿಗ!

*ನರಸಿಂಹ ಎಂ. ಪೈ, ಕಾಸರಗೋಡು*
*ನೀರಿನಲ್ಲಿ ಮುಳುಗಿದರೆ ಶೀತ; ಪ್ರೀತಿಯಲ್ಲಿ ಮುಳುಗಿದರೆ?*



ಗೋತಾ!

*ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಯಲಹಂಕ*
*ಕಾಂಗ್ರೆಸ್ ಎಂದರೇನು?*
ಹಲವಾರು ಜನರಿಗೆ ಅಲರ್ಜಿ ಉಂಟುಮಾಡುವ ಗಿಡ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ಲಣ್ಣ, ಮಠಾಧೀಶರು ತಮ್ಮ ಮಠಗಳಲ್ಲಿ ರಾಮ, ಕೃಷ್ಣ ಎಂದು ಕಾಲ ಕಳೆಯುವ ಬದಲು ರಾಜಕೀಯ, ರಾಜಕಾರಣ ಎಂದು ಜಪಿಸುವುದರ ರಹಸ್ಯ?*
ಮಂತ್ರ ಎನ್ನಲು ಹೋಗಿ ಮಂತ್ರಿ ಎಂದು ನಾಲಿಗೆ ಹೊರಳಿಬಿಟ್ಟಿತಂತೆ.

*ಹೆಚ್.ಆರ್. ಕಡಿವಾಲ, ಬಾದಾಮಿ*
*ಹಣ ಎಂದರೆ ಹೆಣವೂ ಬಾಯಿ ಬಿಡುತ್ತಂತೆ, ನಿಜವಾ?*
ಆ ಕಾಲ ಬಿಡಿ; ಈಗ ಹೆಣ ಬಂದರೂ ಅದರ ಬಾಯಿ ಬಿಡಿಸಿ ಹಣ ಕೀಳುವ ನರ್ಸಿಂಗ್ ಹೋಂಗಳಿವೆ!

*ಎಂ. ಪರಮೇಶ್ವರ, ಮದ್ದಿಹಳ್ಳಿ*
*ನನ್ನನ್ನು ಪ್ರೀತಿಸಲು ಎಂಟೆದೆ ಬೇಕು ಅಂತಾಳಲ್ಲ?*
ಸರಿ ಬಿಡಿ, ಶೂರ್ಪನಖಿ, ತಾಟಕಿ, ಪೂತನಿ, ಹಿಡಿಂಬೆಯರ ಕೊಲಾಬರೇಷನ್ ಇದ್ದಂತಿದ್ದಾಳೆಂದಾಯಿತು!

*ವಿದ್ಯಾ ಎನ್. ಪೈ, ಹೊನ್ನಾವರ*
*ವೈದ್ಯೋ ನಾರಾಯಣೋ ಹರಿಃ ಎನ್ನುವುದೇಕೆ?*
ತಪ್ಪೇನು? ಇಬ್ಬರೂ ಆತುರ (hurry)ದಲ್ಲೇ ಇರುತ್ತಾರೆ. ದೇವನ ಆತುರದಿಂದ ಹುಟ್ಟು, ವೈದ್ಯನ ಆತುರದಿಂದ ಸಾವು!

*ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು*
*ಏನು! ಕೊನೆಯ ತುತ್ತು ಬಹಳ ರುಚಿಯಂತೆ?*
ಕೊನೆಯಲ್ಲಿ ಇರುವುದು ತುತ್ತಲ್ಲ, ಗುಟುಕು ಗಂಗಾಜಲದ್ದು!

*ಎಂ.ಬಿ. ಖೋದಾನುರ, ಸವದತ್ತಿ*
*ಮಕ್ಕಳೇನಾದರೂ ಕಾಲು ಜಾರಿದರೆ ಅದಕ್ಕೆ ಸಮಾಜದ ವ್ಯವಸ್ಥೆಯೇ ಕಾರಣವಲ್ಲವೇ?*
ಅಲ್ಲ, ಬಚ್ಚಲಮನೆಯ ನೆಲ ಸರಿಯಾಗಿ ಉಜ್ಜಿಲ್ಲದಿರುವುದೇ ಕಾರಣ!

*ಬಿಂಡಿಗನವಿಲೆ ರಂಗರಾಜು, ಬೆಂಗಳೂರು*
*ಪಿಂಡ ಸ್ವೀಕಾರಕ್ಕೆ ಕಾಗೆ ಬರಬೇಕು, ಆದರೆ ಕಾಗೆ ಮನೆ ಹೊಕ್ಕರೆ ಮನೆ ಬಿಡಬೇಕು ಅಂತಾರಲ್ಲಾ?*
ದಿನವೂ ಪಿಂಡ ಹಾಕುವ ಪರಿಸ್ಥಿತಿ ಬಂದೀತೆಂಬ ಭಯವಂತೆ!

*ಅಮರಯ್ಯ ಪತ್ರಿಮಠ, ಸುರಪುರ*
*ಯೌವನದ ಅನುಭವಕ್ಕೂ, ವೃದ್ಧಾಪ್ಯದ ಅನುಭವಕ್ಕೂ ವ್ಯತ್ಯಾಸವೇನು?*
ಎರಡೂ ಒಂದೇ; ಯೌವನದಲ್ಲಿ ಮುದುಕರು ಸರಿಯಿಲ್ಲ ಎನ್ನುತ್ತಾರೆ, ವೃದ್ಧಾಪ್ಯದಲ್ಲಿ ಯುವಕರು ಸರಿಯಿಲ್ಲ ಎನ್ನುತ್ತಾರೆ.

## ಬಹುಮಾನಿತ ಪ್ರಶ್ನೆ

*ರಮೇಶ್, ಹನುಮನಾಳು*
*ಹಿಂದೆ ಸಿನಿಮಾ ನೋಡಿ ಹಾಳಾದ ಎನ್ನುತ್ತಿದ್ದರು, ಈಗ ಮನೆಯಲ್ಲಿ ಟಿ.ವಿ. ನೋಡಿ...?*
ಫೇಲ್ ಆದ ಅಂತಾರೆ!

*ಕೆ. ಮಲ್ಲೇಶ, ಕೊಡಸೋಗೆ*
*ಸರ್ಕಾರಿ ಕೆಲಸ ದೇವರ ಕೆಲಸವಾದರೆ ರಾಜಕಾರಣ...?*
ಹುಂಡಿ ಕಳ್ಳ!

*ಕೌಶಿಕ್‌ರಾಜ್, ಹನುಮನಾಳು*
*ತಂತ್ರಜ್ಞಾನ ಎಷ್ಟೇ ಬೆಳೆದರೂ ಹುಡುಗ-ಹುಡುಗಿ ಮಾತ್ರ **I.L.U.** ಎಂಬ ಪದ ಮಾತ್ರ ಹಾಗೆಯೇ ಇಟ್ಟುಕೊಂಡಿದ್ದಾರೇಕೆ?*
ಪ್ರೀತಿ ಒಂದು ವಿಧವಾದ ಐಲು ಎಂದು ಸೂಚಿಸಲು!

*ಎಂ.ಎಸ್. ಸೋಮಶೇಖರ್, ಮೈಸೂರು*
*ಸತಿ-ಪತಿಯರಲ್ಲಿ ಸತಿಗೇ ಅಧಿಕ ವಯಸ್ಸಾಗಿದ್ದರೆ ಏನಾಗುತ್ತೆ?*



ಪತಿಗೆ ಇನ್ಸೂರೆನ್ಸ್ ಹಣ ಸಿಗುವ ಸಾಧ್ಯತೆಗಳು ಹೆಚ್ಚುತ್ತೆ.

*ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ*
*ಹೆಣ್ಣಿಗೆ ಅಂದ ಕೊಟ್ಟು, ಗಂಡಿಗೆ ಆಸೆ ಇಟ್ಟವರು ಯಾರು ಸಾರ್?*
ಬ್ಯೂಟಿ ಪಾರ್ಲರ್‌ನವರು!

*ಖಲಂದರ್ ಅಖೀಲ್‌ಖ್, ಜಾವಗಲ್*
*ಮನೆಯಲ್ಲಿ ಮುತ್ತಿನಂತಹ ಹೆಂಡತಿಯಿದ್ದರೂ ಕೆಲವರು ಪರಸ್ತ್ರೀಯರನ್ನು ಬಯಸಲು ಕಾರಣವೇನು?*
ಮುತ್ತೊಂದೇ ಅಲ್ಲದೆ ಇನ್ನೂ ಎಂಟು ರತ್ನಗಳನ್ನೂ ತಿಳಿಯುವ ಆಸೆಯಂತೆ ಪಾಪ!

*ಎಚ್.ಆರ್. ದೇಸಾಯಿ, ರಾಯಚೂರು*
*ಮಗನನ್ನು ರಾಜಕಾರಣಿಯಾಗಿ ಮಾಡಲು ಏನನ್ನು ಓದಿಸಬೇಕು?*
ಸ್ವಲ್ಪ ಕಾಯಿರಿ; ಮುಖ್ಯಮಂತ್ರಿಗಳು, ಮಾಜಿ ಪ್ರಧಾನಿಗಳು ಆತ್ಮಚರಿತ್ರೆ ಬರೆಯುತ್ತಾರಂತೆ, ಅವನ್ನು ಓದಿದರೆ ಸಾಕು.

■ ರಾಮ್